Government of Karnataka
# KARNATAKA EXAMINATIONS AUTHORITY
Sampige Road, 18th Cross, Malleshwaram, Bangalore-560 012
Fax: 080-23461576 Website: http://kea.kar.nic.in email: keauthority-kar@nic.in

**No. ED/KEA/ADMN/CR- 55/2014-15** **Date: 05-03-2015**

# NOTIFICATION

## Recruitment for the post of Assistant Professors in Government First Grade Colleges in Karnataka State – Inclusion of Additional Posts

Karnataka Examinations Authority has invited the applications for recruitment of 1298 posts of Assistant Professors in Karnataka Government First Grade Colleges through Competitive Examination; vide notification of even no. dated 22-01-2015, as per the provisions laid down in Government Notification No. ED 300 DCE 2013 (Part-3), Bangalore dated 06-11-2014 and "Karnataka Education Department Services (Collegiate Education Department) (Recruitment) (Special) Rules, 2014".

Now, the Government in Order No. ED 254 DCE 2013 Dated 26-02-2015 have directed to include **862** additional posts in different subjects to the same recruitment process earlier notified by this office. Government have also directed to extend the last date up to **23-03-2015** for submission of applications for the **additional 862 posts in the following subjects**:

**Kannada, English, Hindi, Economics, Geography, Commerce, Journalism & Mass Communication, Social Work, Management, Chemistry, Criminology and Fashion Technology**. Competitive Examination will be conducted for recruitment of all **2160** Assistant Professors Posts in different subjects (including 1298 posts which were notified earlier + 862 posts newly notified).

*Please note that among these, **Criminology and Fashion Technology** are the newly added subjects and where as the number of posts for other subjects which are published in earlier notification has increased.*

Please visit KEA Website http://kea.kar.nic.in for details regarding Subject wise and Category wise vacancy positions, Age Limit, Educational Qualification for each Post, Method of Applying, Examination fee, Eligibility Conditions, Syllabus and papers to be attempted, Mode of Selection and Appointment with regard to recruitment to the post of Assistant Professors. The Notification published earlier by this office is also available in the said website. **Interested eligible candidates can apply online on or before 23-03-2015 and the last date to pay the prescribed fees is 24-03-2015.**

***NOTE:*** The word "MBA" which was notified in the earlier notification, may be, read as and deemed to be read as "Management".

*Sd/-* **Sushama Godbole, IAS, Executive Director**

**Helpline Nos. 080 - 23 460 460 (Five Lines) From 9.30 am to 6.00 pm on all working days.**

**Size:16x14**

KEA

ಕರ್ನಾಟಕ ಸರ್ಕಾರ
# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012
ಫ್ಯಾಕ್ಸ್: 080–23461576 ವೆಬ್‌ಸೈಟ್: http://kea.kar.nic.in ಇಮೇಲ್: email: keauthority-kar@nic.in

ಸಂಖ್ಯೆ : ಇಡಿ/ಕೆಇಎ/ಆಡಳಿತ/ಸಿ.ಆರ್.55/2014–15 ದಿನಾಂಕ: 05–03–2015

## ಅಧಿಸೂಚನೆ

## ಕರ್ನಾಟಕದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ – ಹೆಚ್ಚುವರಿ ಹುದ್ದೆಗಳ ಸೇರ್ಪಡೆ

ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 300 ಡಿಸಿಇ 2013 (ಭಾ–3), ಬೆಂಗಳೂರು, ದಿನಾಂಕ 06–11–2014ರ ಹಾಗು "ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ನೇಮಕಾತಿ) (ವಿಶೇಷ) ನಿಯಮಗಳು 2014" ರ ಅನ್ವಯ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 1298 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಸಂಬಂಧ ದಿನಾಂಕ 22–01–2015 ರಂದು ಇದೇ ಸಮಸಂಖ್ಯೆಯ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ಈಗಾಗಲೇ ಪ್ರಕಟಿಸಿದ ಅಧಿಸೂಚನೆಗೆ **862** ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಹೊಸದಾಗಿ ಸೇರಿಸಿ ಇದೇ ನೇಮಕಾತಿ ಪ್ರಕ್ರಿಯೆ ಜೊತೆಯಲ್ಲೇ ಸೇರ್ಪಡೆ ಮಾಡಲು ಸರ್ಕಾರವು ತನ್ನ ಆದೇಶ ಸಂಖ್ಯೆ ಇಡಿ 254 ಡಿಸಿಇ 2013 ದಿನಾಂಕ 26–02–2015 ರಲ್ಲಿ ಸೂಚಿಸಿದೆ ಹಾಗೂ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು **23–03–2015**ರ ವರೆಗೆ ವಿಸ್ತರಿಸಲು ನಿರ್ದೇಶಿಸಿದೆ. 862 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಒಟ್ಟು 12 ವಿಷಯಗಳ ಹುದ್ದೆಗಳನ್ನು ಸೇರ್ಪಡೆ ಮಾಡಿದ್ದು, ವಿಷಯದ ವಿವರಗಳು ಈ ಕೆಳಗಿನಂತಿದೆ.

**ಕನ್ನಡ, ಇಂಗ್ಲೀಷ್, ಹಿಂದಿ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ವಾಣಿಜ್ಯಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಂವಹನ ಶಾಸ್ತ್ರ, ಸಮಾಜಕಾರ್ಯ, ನಿರ್ವಹಣಾಶಾಸ್ತ್ರ, ರಸಾಯನ ಶಾಸ್ತ್ರ, ಅಪರಾಧಶಾಸ್ತ್ರ ಮತ್ತು ಫ್ಯಾಶನ್ ಟೆಕ್ನಾಲಜಿ.** ಒಟ್ಟು 2160 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ (ಈ ಹಿಂದೆ ಹೊರಡಿಸಿದ್ದ ಅಧಿಸೂಚನೆಯಲ್ಲಿ ಸೂಚಿಸಿದ್ದ 1298 ಹುದ್ದೆಗಳು + 862 ಹೊಸದಾಗಿ ಸೇರ್ಪಡೆ ಮಾಡಿದ ಹುದ್ದೆಗಳು) ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುವುದು.

ಇದರಲ್ಲಿ **ಅಪರಾಧಶಾಸ್ತ್ರ ಮತ್ತು ಫ್ಯಾಶನ್ ಟೆಕ್ನಾಲಜಿಯ** 2 ವಿಷಯಗಳ ಹುದ್ದೆಗಳು ಹೊಸದಾಗಿ ಸೇರ್ಪಡೆಯಾಗಿರುತ್ತದೆ. ಉಳಿದಂತೆ ಈ ಹಿಂದೆ ನೀಡಿದ ಅಧಿಸೂಚನೆಯಲ್ಲಿ ಇತರೆ ವಿಷಯಗಳ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿರುತ್ತದೆ.

ಪ್ರವರ್ಗವಾರು ಮತ್ತು ವಿಷಯವಾರು ಹುದ್ದೆಗಳ ವಿವರಗಳು, ಸದರಿ ನೇಮಕಾತಿ ಪ್ರಕ್ರಿಯೆಗೆ ನಿಗದಿ ಪಡಿಸಿರುವ ವಯೋಮಿತಿ, ಶೈಕ್ಷಣಿಕ ಅರ್ಹತೆ, ಅರ್ಜಿ ಸಲ್ಲಿಸುವ ವಿಧಾನ, ಪರೀಕ್ಷೆ ಶುಲ್ಕ, ಆಯಾ ವಿಷಯಗಳಿಗೆ ಅಗತ್ಯ ಅರ್ಹತೆ ವಿವರ, ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆಗಳು, ವಿಷಯಗಳ ವಿವರ ಮತ್ತು ಸಮಾನಾಂತರ ಶಿಕ್ಷಣಾರ್ಹತೆ, ಆಯ್ಕೆ ಪ್ರಕ್ರಿಯೆ ಮತ್ತು ನೇಮಕಾತಿಯ ವಿವರ ಹಾಗೂ ಇತರೆ ಎಲ್ಲ ನೇಮಕಾತಿಯ ವಿವರಗಳನ್ನು ಕೆಇಎ ವೆಬ್ ಸೈಟ್ **http://kea.kar.nic.in** ನಿಂದ ಪಡೆಯಬಹುದಾಗಿದೆ. ಈ ಹಿಂದೆ ಪ್ರಕಟಿಸಿದ್ದ ಅಧಿಸೂಚನೆಯನ್ನೂ ಸಹ ಪ್ರಾಧಿಕಾರದ ವೆಬ್‌ಸೈಟನಲ್ಲಿ ನೋಡಬಹುದಾಗಿದೆ.

**ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ದಿನಾಂಕ 23–03–2015 ರೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು ಹಾಗು ನಿಗದಿತ ಶುಲ್ಕವನ್ನು ಪಾವತಿಸಲು ಅಂತಿಮ ದಿನಾಂಕ 24–03–2015.**

**ಸೂಚನೆ:** ಪ್ರಾಧಿಕಾರದಿಂದ ಈ ಹಿಂದೆ ಹೊರಡಿಸಿದ್ದ ಅಧಿಸೂಚನೆಯಲ್ಲಿ "ಎಂಬಿಎ" ಎಂದು ನಮೂದಿಸಿರುವ ಪದವನ್ನು "ನಿರ್ವಹಣಾಶಾಸ್ತ್ರ" ಎಂದು ಅರ್ಥೈಸಿಕೊಳ್ಳತಕ್ಕದ್ದು.

**ಸಹಿ/– ಸುಷಮಾ ಗೋಡಬೋಲೆ, ಭಾ.ಆ.ಸೇ., ಕಾರ್ಯನಿರ್ವಾಹಕ ನಿರ್ದೇಶಕರು**

**ಸಹಾಯವಾಣಿ ಸಂಖ್ಯೆ: 080 – 23 460 460 (5 ಲೈನ್‌ಗಳು) ಬೆಳಿಗ್ಗೆ 9.30 ರಿಂದ ಸಂಜೆ 6.00 ರವರೆಗೆ ವಾರದ ಎಲ್ಲಾ ಕೆಲಸದ ದಿವಸಗಳಲ್ಲಿ**

**Size:16x14**